ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr.AmbedkarVeedhi, Bengaluru,
E-mail ID: registrarevlubcu@gmail.com, Ph.No: 22295559

No.BCU/B.Ed/Exam/2018-19/30 Date: 15.04.2019

# ಸುತ್ತೋಲೆ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಪ್ರಥಮ ಸೆಮೆಸ್ಟರ್ ಬಿ.ಎಡ್. ಪರೀಕ್ಷೆಗಳು ದಿನಾಂಕ 25.04.2019ರಿಂದ ಪ್ರಾರಂಭವಾಗಲಿರುವ ಹಿನ್ನೆಲೆಯಲ್ಲಿ, ಪರೀಕ್ಷಾ ಕೇಂದ್ರಗಳಿಗೆ ಬೇಕಾದ ಖಾಲಿ ಉತ್ತರ ಪತ್ರಿಕೆಗಳು ಮತ್ತು ಪ್ರಶ್ನೆ ಪತ್ರಿಕೆಗಳನ್ನು ಈ ಕೆಳಕಂಡ ದಿನಾಂಕಗಳಲ್ಲಿ ಮಾತ್ರ ವಿತರಿಸಲಾಗುವುದು. ಆದುದರಿಂದ, ಸಂಬಂಧಪಟ್ಟ ಪರೀಕ್ಷಾ ಕೇಂದ್ರದ ಪ್ರಾಂಶುಪಾಲರು/ಚೀಫ್ ಸೂಪರಿಂಟೆಂಡೆಂಟ್ ಅವರು ಖುದ್ದಾಗಿ ಅಥವಾ ಅವರ ಪರವಾಗಿ ಉತ್ತರ ಪತ್ರಿಕೆ ಹಾಗೂ ಪ್ರಶ್ನೆ ಪತ್ರಿಕೆಯನ್ನು ಪಡೆಯಲು ಕಾಲೇಜಿನ ಅಂಗೀಕೃತ ಪತ್ರ ಮತ್ತು ಕಾಲೇಜಿನ ಗುರುತಿನ ಚೀಟಿಯೊಂದಿಗೆ ಬಂದರೆ ಉತ್ತರ ಪತ್ರಿಕೆ ಮತ್ತು ಪ್ರಶ್ನೆ ಪತ್ರಿಕೆಗಳನ್ನು ನೀಡಲಾಗುವುದು. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಪಡೆಯಲು ಪ್ರತ್ಯೇಕ ಪತ್ರಗಳನ್ನು ತರಬೇಕು.

1. ಖಾಲಿ ಉತ್ತರ ಪತ್ರಿಕೆಗಳನ್ನು ವಿತರಿಸುವ ದಿನಾಂಕ: 22.04.2019 ಮತ್ತು 23.04.2019.
2. ಪ್ರಶ್ನೆ ಪತ್ರಿಕೆ ವಿತರಿಸುವ ದಿನಾಂಕ: 24.04.2019.

ಬಿ.ಎಡ್. ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ದಯವಿಟ್ಟು ಮೇಲ್ಕಂಡ ದಿನಾಂಕಗಳಂದು ಮಾತ್ರ ಉತ್ತರ ಪತ್ರಿಕೆಗಳನ್ನು ಹಾಗೂ ಪ್ರಶ್ನೆ ಪತ್ರಿಕೆಗಳನ್ನು ಪಡೆಯಬೇಕೆಂದು ಕೋರಲಾಗಿದೆ.

15/4/19

**ಕುಲಸಚಿವರು (ಮೌಲ್ಯಮಾಪನ)**

ಗೆ,

1. ಎಲ್ಲಾ ಬಿ.ಎಡ್. ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ.
2. ವೆಬ್‌ಸೈಟ್ ಮೆನೇಜರ್, ಬೆಂಗಳೂರು ಸೆಂಟ್ರಲ್ ಯುನಿವರ್ಸಿಟಿ. ಈ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟಿನಲ್ಲಿ ಅಪ್ಲೋಡ್ ಮಾಡಲು ಮತ್ತು ಬಿ.ಎಡ್ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರ ಪೋರ್ಟಲ್ ಮೂಲಕ ತಿಳಿಸಲು ಸೂಚಿಸಿದೆ.